ಶಾಸಕರ ಹಂತದಲ್ಲಿ ಯಾವ ಅಧಿಕಾರ ಉಳಿಸಿಕೊಳ್ಳಬೇಕಾಗುತ್ತದೆ ಎಂಬ ಬಗ್ಗೆ ಚರ್ಚೆ ಮಾಡೋಣ. ಇದನ್ನು ನಾನು ನಿರ್ವಿಕಾರ ಮನೋಭಾವದಿಂದ ಚರ್ಚೆ ಮಾಡುವುದಕ್ಕೆ ಸಿದ್ಧನಿದ್ದೇನೆ. ಸ್ಪೀಕರ್‌ರವರ ಕೊಠಡಿಗೆ ಹೋಗಿ ನಾವು ಹಿರಿಯರೆಲ್ಲ ಸೇರಿ ಕುಳಿತುಕೊಂಡು ವಿಚಾರ ಮಾಡೋಣ. ಆಕ್ಟ್ ಒಂದು ಕಡೆ ಇದೆ. ಆ ಆಕ್ಟ್ ಪ್ರಕಾರ ಆ ಸಂಸ್ಥೆಗಳಿಗೆ ಯಾವ್ಯಾವ ಪವರ್ಸ್ ಡೆಲಿಗೇಟ್ ಮಾಡಬೇಕು ಅನ್ನತಕ್ಕಂಥಾದ್ದನ್ನು ಪರಿಶೀಲನೆ ಮಾಡಿ ತಾವು ಕೊಡತಕ್ಕಂತಹ ಸಲಹೆ ಗಮನದಲ್ಲಿಟ್ಟುಕೊಂಡು ನಿರ್ಣಯ ಮಾಡುತ್ತೇವೆ.

## ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವ

ಅಧ್ಯಕ್ಷರು : ಚರ್ಚೆ ಇಲ್ಲಿಗೆ ಮುಕ್ತಾಯವಾಯಿತು. ಸನ್ಮಾನ್ಯ ಸದಸ್ಯರಾದ ನಾಗೇಗೌಡರು ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವ ಮಾಡಬೇಕು.

ಶ್ರೀ ಕೆ.ಎನ್. ನಾಗೇಗೌಡ : ಮಾನ್ಯ ಅಧ್ಯಕ್ಷರೇ, 1995ನೇ ಮಾರ್ಚ್ 31ರಂದು ವಿಧಾನ ಮಂಡಲದ ಸದಸ್ಯರನ್ನು ಉದ್ದೇಶಿಸಿ ದಯಪಾಲಿಸಿದ ಭಾಷಣಕ್ಕಾಗಿ ಈ ವಂದನೆಗಳನ್ನು ಸಮರ್ಪಿಸಲು ಅಪ್ಪಣೆ ಕೋರುತ್ತೇವೆ ಎಂದು ಈ ಪ್ರಸ್ತಾವನೆಯಲ್ಲಿ ಸೂಚಿಸುತ್ತೇನೆ.

ಶ್ರೀ ಜಿ. ಬಸವಣ್ಣಪ್ಪ : ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಶ್ರೀ ಕೆ.ಎನ್. ನಾಗೇಗೌಡರು ರಾಜ್ಯಪಾಲರ ಭಾಷಣಕ್ಕೆ ಕೃತಜ್ಞತಾಪೂರ್ವಕ ವಂದನೆಗಳನ್ನು ಸಮರ್ಪಿಸಲು ಮಂಡಿಸಿರುವ ಸೂಚನೆಯನ್ನು ಅನುಮೋದಿಸುತ್ತೇನೆ.

ಶ್ರೀ ಕೆ.ಎನ್. ನಾಗೇಗೌಡ (ಕಿರುಗಾವಲು) : ಮಾನ್ಯ ಅಧ್ಯಕ್ಷರೆ, ಇದೇ ಮಾರ್ಚ್ 20ನೇ ತಾರೀಖಿನಂದು ಉಭಯ ಸದನಗಳನ್ನುದ್ದೇಶಿಸಿ ರಾಜ್ಯಪಾಲರು ಮಾಡಿದಂಥ ಭಾಷಣಕ್ಕೆ ನಾನು ಕೃತಜ್ಞತೆಗಳನ್ನರ್ಪಿಸುತ್ತಾ ಕೆಲವಾರು ವಿಚಾರಗಳನ್ನು ಸದನದ ಗಮನಕ್ಕೆ ತರಲು ಇಚ್ಛಿಪಡುತ್ತೇನೆ. ಈಗಾಗಲೇ ಅನೇಕ ವಿಚಾರಗಳು ಇವ್ಹೊತ್ತಿನ ದಿವಸ ಸದನದ ಗಮನಕ್ಕೆ ತರುವಂಥ ಪ್ರಸಂಗ ಬಂದಿದೆ. ಮೊದಲನೆಯದಾಗಿ ಹೇಳಬೇಕೆಂದರೆ, ನಮ್ಮ ಸಂಸದೀಯ ವ್ಯವಸ್ಥೆಯಲ್ಲಿ ಇವ್ಹೊತ್ತು ಸದನದಲ್ಲಿ ನಡೆದಂಥ ನಡವಳಿಕೆ ಅತ್ಯಂತ ವಿಷಾದನೀಯವಾದ ನಡವಳಿಕೆ ಎಂದು ನಾನು ಭಾವಿಸುತ್ತೇನೆ. ನಾನು ಸುಮಾರು 13-14ವರ್ಷಗಳ ಕಾಲ ಶಾಸನಸಭೆಯಲ್ಲಿ ಆಡಳಿತ ಪಕ್ಷದಲ್ಲಿದ್ದುಕೊಂಡು ಕೆಲಸ ಮಾಡಿದ್ದೇನೆ, ವಿರೋಧ ಪಕ್ಷದಲ್ಲಿದ್ದುಕೊಂಡು ಕೆಲಸ ಮಾಡಿದ್ದೇನೆ ಹಾಗೂ ಈಗ ನಾನು ಯಾವ ಪಕ್ಷದಲ್ಲಿದ್ದೇನೆಯೋ ಆ ಪಕ್ಷವನ್ನೇ ಹಿಂದೆ ತೀವ್ರವಾಗಿ ಟೀಕಿಸಿದಂಥ ಪ್ರಸಂಗಗಳನ್ನು ತಾವು ಅನೇಕ ಸಾರಿ ನೋಡಿದ್ದೀರಿ ಮತ್ತು ಮಂತ್ರಿಮಂಡಲದಲ್ಲಿ ನಡೆದಂಥ ನಡವಳಿಕೆಗಳನ್ನು, ತೀರ್ಮಾನಗಳನ್ನು ನಾನು ತೆಗೆದುಕೊಂಡು ಬಂದು ಸದನದ ಮುಂದಿಟ್ಟಂಥ ಪ್ರಸಂಗವನ್ನೂ ಸಹ ನೋಡಿದ್ದೀರಿ. ಆದರೆ, ಸದನದಲ್ಲಿ ಈಗ ವಿರೋಧ ಪಕ್ಷದ ನಾಯಕರಿಲ್ಲ. ನಮ್ಮ ಮಾಜಿ ಮುಖ್ಯಮಂತ್ರಿಗಳು, ಮಂತ್ರಿಗಳು ಮತ್ತು ನಾವೆಲ್ಲರೂ ಒಟ್ಟಾಗಿ ಸೇರಿ ಕೆಲಸ ಮಾಡಿದ ದಿನಗಳನ್ನು ನೆನಪಿಸಿಕೊಳ್ಳುತ್ತೇನೆ. ಇವ್ಹೊತ್ತು ನನ್ನ ಮನಸ್ಸಿಗಾದ ನೋವಿನ ವಿಚಾರವೇನೆಂದರೆ, ವಿರೋಧ ಪಕ್ಷದ ನಾಯಕರು ಸದನದಲ್ಲಿರದ ಸಂದರ್ಭದಲ್ಲಿ ನಾನು ಆಡಬಾರದು. ಆದರೆ, ವಿಧಿ ಇಲ್ಲದೆ ಹೇಳಬೇಕಾಗಿರುವ ಪ್ರಸಂಗ ಬಂದಿರುವುದರಿಂದ ಇವ್ಹೊತ್ತು ಸಭಾಧ್ಯಕ್ಷರು ಕ್ಷಮಾಪಣೆ ಕೇಳುವ ಮಟ್ಟಕ್ಕೆ ನಾವು ಪರಿಸ್ಥಿತಿಯನ್ನು ತಲುಪಿದ್ದೇವಲ್ಲ ಎನ್ನುವ ವಿಚಾರ ನನ್ನ ಮನಸ್ಸಿಗೆ ನೋವನ್ನುಂಟು ಮಾಡಿದೆ. ಆದರಲ್ಲೂ ತಾವು ಪದೇ ಪದೇ ಮಾತನಾಡುತ್ತಾ ನೀವು ಶಾಸಕಾಂಗದ ಒಂದು ಅಂಗ, ಸರ್ಕಾರದ ಒಂದು ಅಂಗ

ಅಲ್ಲ ಎಂದು ಹೇಳಿದ್ದೀರಿ. ನಿಯಮಾವಳಿ ಪ್ರಕಾರ ಆಡಳಿತ ಪಕ್ಷದ ಸದಸ್ಯರಾಗಿ ರಾಜ್ಯಪಾಲರು ಮಾಡಿರತಕ್ಕ ಭಾಷಣಕ್ಕೆ ವಂದನೆ ಸಲ್ಲಿಸತಕ್ಕ ಸೂಚನೆ ಸಹ ಶಾಸಕಾಂಗದ ಒಂದು ಸೂಚನೆಯಾಗಿದೆ. ಅಲ್ಲದೆ, 'ನಾನು ಆದೇಶಿಸುತ್ತೇನೆ' ಎನ್ನುವ ಒಂದು ಮಾತನ್ನಾಡಿದರು. ಯಾವ ರಾಜ್ಯಾಂಗದಲ್ಲಾಗಲಿ, ಯಾವುದೇ ನಿಯಮಾವಳಿಯಲ್ಲಾಗಲಿ ವಿರೋಧ ಪಕ್ಷದ ನಾಯಕರು ಅಧಿಕಾರಿಗಳಿಗೆ ಆದೇಶ ಕೊಡಬಹುದೆಂದು ಇದ್ದರೆ, ಅದನ್ನು ನಾನು ಎಲ್ಲಿಯೂ ಕೇಳಿಲ್ಲ. ನನ್ನ 24 ವರ್ಷಗಳ ರಾಜಕೀಯ ಜೀವನದಲ್ಲಿ ಆಡಳಿತ ಮತ್ತು ವಿರೋಧ ಪಕ್ಷದಲ್ಲಿದ್ದುಕೊಂಡು 7-8 ಮುಖ್ಯ ಮಂತ್ರಿಗಳನ್ನು ನೋಡಿದ್ದೇನೆ, ನಾನು ಎಂದೂ ಸಹ ಈ ತರಹ ವಿಚಾರ ಕೇಳಿಲ್ಲ.

ಕಡತಗಳನ್ನು ಕೊಡುವುದಕ್ಕೆ ಅಧಿಕಾರಿಗಳಿಗೆ ನಾನು ನಿರ್ದೇಶನ ಕೊಡುತ್ತೇನೆ ಎಂದು ವಿರೋಧ ಪಕ್ಷದ ನಾಯಕರು ಹೇಳಿದ್ದನ್ನು ನಾನು ಕೇಳಿಲ್ಲ. ಇದರ ಅರ್ಥ ಏನೆಂದರೆ, ವಿರೋಧ ಪಕ್ಷದ ನಾಯಕರಿಗೆ ಏನು ಪ್ರಿವಿಲೇಜ್ ಇದೆ? ಶಾಸಕರಾದವರಿಗೆ ಇರುವ ಪ್ರಿವಿಲೇಜ್ ಏನು? ಎಕ್ಸಿಕ್ಯುಟಿವ್ ಪ್ರಿವಿಲೇಜ್ ಏನು? ಎಕ್ಸಿಕ್ಯೂಟಿವ್ ಡ್ಯೂಟಿಗಳೇನು? ಶಾಸಕರ ಕರ್ತವ್ಯಗಳೇನು? ಎನ್ನುವ ಪರಿಕಲ್ಪನೆ ಮರೆತಂತೆ ಕಾಣುತ್ತದೆ. ಆದರೆ, ಎಕ್ಸಿಕ್ಯೂಟಿವ್ ಹೆಡ್, ಶಾಸಕರು, ಸಂಸತ್ ಸದಸ್ಯರು ಆಡಳಿತದ ಸದನಗಳನ್ನುದ್ದೇಶಿಸಿ ಭಾಷಣ ಮಾಡಿದ್ದಾರೆ. ತಮಗೆ ಗೊತ್ತಿರುವಂತೆ ರಾಜ್ಯಪಾಲರ ಭಾಷಣದಲ್ಲಿ ಪ್ರಸ್ತಾಪವಾಗುವ ವಿಚಾರವೇನೆಂದರೆ ಸರ್ಕಾರ ಬರುವ ವರ್ಷದಲ್ಲಿ ತಾನು ಕೈಗೊಳ್ಳಬೇಕಾದ ವಿಷಯದಲ್ಲಿನ ನೀತಿ, ಧೋರಣೆ ಇರುತ್ತದೆ. ಮಂತ್ರಿಮಂಡಲವಾದರೂ ಏಷ್ಟೋ, ಅವರು ಏನು ತೀರ್ಮಾನ ಮಾಡುತ್ತಾರೆ, ಮತ್ತು ಏನು ಸೂಚನೆ ಕೊಡುತ್ತಾರೆ, ಏನು ಸಿದ್ಧಾಂತ ಹೇಳುತ್ತಾರೆ, ಅದನ್ನು ಓದಿ ಹೇಳುವಂತಾದ್ದು ಆಡಳಿತದ ಒಂದು ಅಂಗ. ಇವೊತ್ತು ರಾಜ್ಯಪಾಲರು ಒಂದು ಎಕ್ಸಿಕ್ಯೂಟಿವ್ ಅಲ್ಲ, ಒಂದು ಲೆಜಿಸ್ಲೇಚರ್. ಅದೇ ರೀತಿ ವಿರೋಧ ಪಕ್ಷದ ನಾಯಕರು ಸಹ ನಮ್ಮ ಸಂಸದೀಯ ಪದ್ಧತಿಯಲ್ಲಿ ಇರತಕ್ಕಂಥವರು .....

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ವಿರೋಧ ಪಕ್ಷದ ನಾಯಕರು ಈಗ ಸದನದಲ್ಲಿಲ್ಲ, ಅವರು ಬಂದ ನಂತರ ಮಾತನಾಡಿ. ಅವರು ಇಲ್ಲದಿರುವಾಗ ಮಾತನಾಡುವುದು ಸರಿಯಲ್ಲ.

ಅಧ್ಯಕ್ಷರು : ಈಗ ಸದನವನ್ನು ಮುಂದೂಡಿ ಮತ್ತೆ ನಾಳೆ ಬೆಳಿಗ್ಗೆ 11.00 ಗಂಟೆಗೆ ಸೇರುತ್ತಾ ಹಣಕಾಸು ಮತ್ತು ಯೋಜನಾ ಸಚಿವರಿಂದ 1995-96ನೇ ಸಾಲಿನ ಆಯವ್ಯಯ ಪತ್ರದ ಮಂಡನೆಯಾಗುವುದು.

(ಸದನವು ರಾತ್ರಿ 8 ಗಂಟೆ 25 ನಿಮಿಷಕ್ಕೆ ಮುಕ್ತಾಯಗೊಂದು ಪುನಃ ದಿನಾಂಕ 23ನೇ ಮಾರ್ಚ್ 1995ರ ಗುರುವಾರದಂದು ಬೆಳಿಗ್ಗೆ 11.00 ಗಂಟೆಗೆ ಸೇರಲು ನಿಶ್ಚಯಿಸಿತು)

---

+ ಈ ಚಿಹ್ನೆ ಮಾನ್ಯ ಸದಸ್ಯರ ಟಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.